‘‘ಅದು...’’ ಗುತ್ತಿಗೆದಾರ ಏನನ್ನೋ ಹೇಳುವುದಕ್ಕೆ ಹೊರಟಿದ್ದ. ಅಧಿಕಾರಿ ಆತನ ಮಾತನ್ನು ಅರ್ಧಕ್ಕೇ ತಡೆದ.

‘‘ಇಂತಹ ಪ್ರಕರಣವನ್ನು ನನ್ನ ವೃತ್ತಿಜೀವನದಲ್ಲಿ ಇದೇ ಮೊದಲ ಬಾರಿಗೆ ಕಾಣುತ್ತಿದ್ದೇನೆ. ಕಳ್ಳ ಸಿಮೆಂಟನ್ನು ಬಿಟ್ಟುಹೋಗಿದ್ದಾನೆ; ಚೀಲಗಳನ್ನು ಮಾತ್ರ ಒಯ್ದಿದ್ದಾನೆ...’’

ಅಧಿಕಾರಿಯ ಕೈಯಲ್ಲಿ ಒಂದು ಪುಸ್ತಕ ಇತ್ತು; ದಪ್ಪನೆಯದು. ಅದರಲ್ಲಿ ಕಾನೂನಿನ ವಿಷಯಗಳಿದ್ದವೋ, ಅರಣ್ಯ ಜೀವನದ ಬಗೆಗಿನ ಮಾಹಿತಿಗಳಿದ್ದವೋ, ಆದಿವಾಸಿಗಳ ಕಟ್ಟುನಿಟ್ಟಿನ ಜೀವನವನ್ನು ಕುರಿತಾದ ಅಂಶಗಳಿದ್ದವೋ ತಿಳಿಯದು. ಆದರೆ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಆ ಅಧಿಕಾರಿಗೆ ಪುಸ್ತಕದ ಅವಶ್ಯಕತೆ ಇದ್ದಂತೆ ಕಂಡುಬರಲಿಲ್ಲ.

‘‘ಇದು ಕಳ್ಳತನ ಎಂದು ಪರಿಗಣಿಸಲಾಗದು; ನೀವೂ ಅರ್ಥ ಮಾಡಿಕೊಳ್ಳಿ. ಇಷ್ಟೊಂದು ಚಳಿಯ ವಾತಾವರಣದಲ್ಲಿ ಐದು ಖಾಲಿ ಚೀಲಗಳು ಕಳುವಾಗಿರುವುದಕ್ಕೆ ಸಂಬಂಧಿಸಿದಂತೆ ದೂರನ್ನು ತೆಗೆದುಕೊಳ್ಳುವುದು ಎಷ್ಟರ ಮಟ್ಟಿಗೆ ಸರಿ! ನೀವೇ ಯೋಚಿಸಿ...’’

‘‘ಕಳುವಾಗಿರುವುದು ಕೇವಲ ಚೀಲಗಳಾಗಿದ್ದರೂ ಅವುಗಳನ್ನು ಒಯ್ಯಲಾದ ವಿಧಾನ...’’ ಗುತ್ತಿಗೆದಾರ ಆಕ್ಷೇಪ ವ್ಯಕ್ತಪಡಿಸಿದ. ಅಧಿಕಾರಿ ಉತ್ತರಿಸಲಿಲ್ಲ. ಬದಲಿಗೆ ಸುತ್ತಲೂ ಒಮ್ಮೆ ತನ್ನ ದೃಷ್ಟಿ ಹರಿಸಿದ. ದಟ್ಟ ಅರಣ್ಯ. ನಡುವೆ ಒಂದು ಸಣ್ಣ ದಾರಿ. ಒಂದೆಡೆ ಬೇಸಾಯ ಮಾಡಲಾಗಿದ್ದ ಸಣ್ಣ ಗದ್ದೆ ಕಂಡುಬಂತು. ಆ ಸ್ಥಳದತ್ತ ಆತ ಹೆಜ್ಜೆ ಹಾಕಿದ. ನೀರವ ಮೌನ. ನಾಲ್ಕಾರು ಹಕ್ಕಿಗಳು ಏನನ್ನೋ ಗುಸುಗುಟ್ಟುತ್ತಿರುವ ಸದ್ದು; ಚಿಲಿಪಿಲಿ. ಸ್ವಲ್ಪ ದೂರ ನಡೆದ ನಂತರ ಒಂದು ಸಣ್ಣ ತಾಂಡಾ. ಆರೇಳು ಜನರು ಅರೆನಗ್ನ ರೀತಿಯಲ್ಲಿ ಕಂಡುಬಂದರು. ಅಪರಾಧಿ ಕಣ್ಣಿಗೆ ಬೀಳಬಹುದೇ ಎನ್ನುವ ಕುತೂಹಲ ಅಧಿಕಾರಿಯ ಕಣ್ಣುಗಳಲ್ಲಿ. ಅಲ್ಲಿದ್ದವರೆಲ್ಲರೂ, ಗುತ್ತಿಗೆದಾರನನ್ನು ಹೊರತುಪಡಿಸಿ, ‘‘ಬಿಟ್ಟುಬಿಡಿ ಸಾಹೇಬರೇ...’’ ಎಂದು ಅಂಗಲಾಚಿದರು.

‘‘ಸರಿ...’’ ಹೇಳಿದ ಅಧಿಕಾರಿ, ಪೇದೆಯ ಜೊತೆಯಲ್ಲಿ ಅಲ್ಲಿಂದ ಹೊರಟೇಬಿಟ್ಟ. ಗುತ್ತಿಗೆದಾರನ ಕಣ್ಣುಗಳು ಕುದಿಯುತ್ತಿದ್ದವು. ಆತನ ದೃಷ್ಟಿ ವೃದ್ಧ ಬುಂಡುವಿನ ಮೇಲೆ ನೆಟ್ಟಿತು. ಅದನ್ನು ಗಮನಿಸಿದ ಕೂಡಲೇ ಬುಂಡು, ಆತನ ಕಾಲುಗಳನ್ನು ಗಟ್ಟಿಯಾಗಿ ಹಿಡಿದುಕೊಂಡು, ಪರಿಪರಿಯಾಗಿ ಬೇಡಿಕೊಳ್ಳುತ್ತಿದ್ದ.

‘‘ಒಡೆಯ, ದೊಡ್ಡ ಸಾಹೇಬರೂ ಇದು ಕಳ್ಳತನ ಅಲ್ಲವೆಂದು ಹೇಳಿ ಹೋಗಿದ್ದಾರೆ. ನನ್ನನ್ನು ನೌಕರಿಯಿಂದ ತೆಗೆದುಹಾಕಬೇಡಿ ದಣಿ. ಮನೆಯಲ್ಲಿ ಸಣ್ಣಸಣ್ಣ ಮಕ್ಕಳಿದ್ದಾರೆ. ಇಡೀ ಸಂಸಾರವೇ ಬೀದಿಗೆ ಬಂದುಬಿಡುತ್ತದೆ...’’

ಆತನ ಗೋಳಾಟ, ರೋದನ ಹೇಳತೀರದು. ಈ ಎಲ್ಲ ಘಟನೆಗಳನ್ನೂ ಬಾಂಟು ಬೆಳಗಿನಿಂದಲೂ ಗಮನಿಸುತ್ತಲೇ ಇದ್ದ. ಆತ ತನ್ನ ಎತ್ತಿನ ಗಾಡಿಯೊಂದಿಗೆ ಅಲ್ಲಿ ಹಾಜರಿದ್ದ. ಆತ ತನ್ನ ಕೈಗಳಲ್ಲಿದ್ದ ಕಲ್ಲಿನ ಹರಳುಗಳನ್ನು ಒಂದು ಕೈನಿಂದ ಇನ್ನೊಂದಕ್ಕೆ ಬದಲಾಯಿಸುತ್ತಲೇ, ಒಂದು ಹರಳೂ ಕೂಡ ಕೆಳಕ್ಕೆ ಬೀಳದಂತೆ ನೋಡಿಕೊಳ್ಳುತ್ತಲೇ ಇಲ್ಲಿನ ಎಲ್ಲ ಬೆಳವಣಿಗೆಗಳನ್ನು ವೀಕ್ಷಿಸುತ್ತಿದ್ದ. ಆತನ ‘ಎಣಿಕೆ’ ಎಂದೂ ತಪ್ಪಾಗಿಲ್ಲ. ಕೇವಲ ಐದು ಚೀಲಗಳು... ಖಾಲಿ ಚೀಲಗಳು... ಕಾಡಿನಿಂದ ಹೊರಕ್ಕೆ ಬರಬಾರದು...

★★★

ಅತ್ತ...

ರಾಂಚಿ ಸೇರಿಕೊಂಡಿದ್ದ ಅಂಗಡಿಯವ ಮತ್ತು ಆತ ಕಾಡಿನ ಜನರಿಗೆ ಹಂಚುತ್ತಿದ್ದ ಬಟ್ಟೆಗಳಿಗೆ ಸರ್ಕಾರದ ಹಣವನ್ನು ಜಮಾ ಮಾಡುತ್ತಿದ್ದ ಸರ್ಕಾರಿ ಅಧಿಕಾರಿ ಒಂದು ಪ್ರಶಾಂತ ಸ್ಥಳದಲ್ಲಿ ಕುಳಿತುಕೊಂಡಿದ್ದರು. ಅವರ ಮುಂದೆ ವಿಶೇಷ ಪಾನೀಯ ಹಾಗೂ ತಿನಿಸುಗಳಿದ್ದವು. ಒಂದು ಹಂತದ